**<u>ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು</u>**

ಸಾಕ್ಷಿಯ ಹೆಸರು :- ಚೇತನ್

ತಂದೆ/ಗಂಡನ ಹೆಸರು :- ಶ್ರೀನಿವಾಸ

ವಯಸ್ಸು :- 34 ವರ್ಷ

ಉದ್ಯೋಗ :- ಖಾಸಗಿ

ವಾಸಸ್ಥಳ :- ಮದ್ದೂರು ಟೌನ್, ಮದ್ದೂರು

(ಸಾಕ್ಷಿಗೆ ದಿನಾಂಕಃ 25-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

ಮೃತ ಪ್ರಿಯಾಂಕ ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ , ಯಾವುದೇ ಹೇಳಿಕೆ ನೀಡಿಲ್ಲ.

ಈಗ ನೋಡುತ್ತಿರುವ ಎರಡು ದಾಖಲೆಗಳಲ್ಲಿ ಸಹಿಯು ನನ್ನದು, ಸದರಿ ದಾಖಲೆಗಳನ್ನು ಅಮಾನತ್ತು ಮಹಜರ್ ಮತ್ತು ಸ್ಥಳ ಮಹಜರ್ ಆಗಿದ್ದು, ಅವುಗಳನ್ನು ನಿಪಿ-2, 3 ಎಂದು, ಸಾಕ್ಷಿಯ ಸಹಿಗಳು ನಿಪಿ-2 ಎ, ನಿಪಿ-3 ಎ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗಳಿಗೆ ನನ್ನನ್ನು ಹೊರತುಪಡಿಸಿ ಬೇರೆಯಾರು ಸಹಿ ಮಾಡಿದ್ದರೆಂದು ನನಗೆ ಗೊತ್ತಿಲ್ಲ, ಸದರಿ ದಾಖಲೆಗಳಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಠಾಣೆಗೆ ಹೋಗಿದ್ದಾಗ ಈಗ ನೋಡುತ್ತಿರುವ ಪೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ನಿಪಿ-4, 5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋಗಳನ್ನು ಅಪಘಾತದ ಸ್ಥ,ಳದಲ್ಲಿ ಸುಮಾರು 2-3 ವರ್ಷದ ಹಿಂದೆ ತೆಗೆದಿರುತ್ತಾರೆ, ಅವುಗಳನ್ನು ಏಕೆ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಅವುಗಳನ್ನು ನಿಪಿ-6, 7 ಎಂದು ಗುರುಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿ 25-03-2023 ರಂದು ಸಂಜೆ 4.50 ರ ಸಮಯದಲ್ಲಿ ಮಂಡ್ಯ ಕಡೆಯಿಂದ ಮದ್ದೂರು ಕಡೆಗೆ ಬೆಂಗಳೂರು - ಮೈಸೂರು ರಾ.ಹೆದ್ದಾರಿಯಲ್ಲಿ ನಿಮ್ಮ ವಾಹನದಲ್ಲಿ

ಬರುತ್ತಿದ್ದಾಗ ನಿಮ್ಮ ಮುಂದೆ ಕೆಎ-50-ವಿ-1128 ಬಜಾಜ್ ಪಲ್ಸರ್ ಆರ್ ಎಸ್ 200 ಮೋ ಸೈಕಲ್ ನಲ್ಲಿ ಒಬ್ಬ ವ್ಯಕ್ತಿಯು ತಮ್ಮ ಹಿಂಬದಿ ಸೀಟ್ ನಲ್ಲಿ ಒಬ್ಬ ಹೆಂಗಸನ್ನು ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೆಂಗಳೂರು ಕಡೆಗಾದಂತೆ ಅಂಬರ ರೆಸಾರ್ಟ್ ಹತ್ತಿರ ಹೋಗುತ್ತಿದ್ದಾಗ, ಮುಂದೆ ಯಾವುದೋ ಒಂದು ವಾಹನಕ್ಕೆ ಡಿಕ್ಕಿಪಡಿಸಿ, ಸದರಿ ಬೈಕ್ ಸವಾರ ಸಡನ್ ಆಗಿ ಬ್ರೇಕ್ ಹಾಕಿದಾಗ ಬೈಕ್ ನಿಯಂತ್ರಣ ತಪ್ಪಿ ಸ್ವತಃ ರಸ್ತೆಯ ಮೇಲೆ ಬಿದ್ದಿದ್ದು, ಅದನ್ನು ನೀವು ಹೋಗಿ ನೋಡಿದಾಗ ಸದರಿ ಬೈಕ್ ನ ಹಿಂಬದಿ ಕುಳಿತ್ತಿದ್ದ ಹೆಂಗಸಿಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಬೈಕ್ ಚಾಲನೆ ಮಾಡುತ್ತಿದ್ದ ವ್ಯಕ್ತಿಗೂ ಪೆಟ್ಟಾಗಿ ಎಡಗೈ ಕಟ್ಟಾಗಿದ್ದು, ಸದರಿಯವರು ಮೃತ ಪ್ರಿಯಾಂಕ ಮತ್ತು ಆರೋಪಿಯಾಗಿದ್ದು, ಸದರಿಯವರನ್ನು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಿ, ಸದರಿ ವಿಚಾರವನ್ನು ಮೃತ ಪ್ರಿಯಾಂಕ ರವರ ಸಹೋದರನಾದ ಚಾಸಾ-1 ರವರಿಗೆ ಕರೆ ಮಾಡಿ ಹೇಳಿದ್ದೆ ಎಂದರೆ ಸರಿಯಲ್ಲ.

ಅದರಂತೆ 28-03-2023 ರಂದು ಠಾಣೆಗೆ ಹಾಜರಾಗಿ 'ದಿ 25-03-2023 ರಂದು..................ಮತ್ತೆ ನೋಡಿದರೆ ಗುರುತಿಸುತ್ತೇನೆ.'' ಎಂದು ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ನಿರಾಕರಣೆಯ ಭಾಗವನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಿದ್ದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿ 26-03-2023 ರಂದು ಬೆಳಗ್ಗೆ 10.30-11.00 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ-3, 4 ರವರ ಸಮಕ್ಷಮ ನಿಪಿ-2 ರಂತೆ ಅಮಾನತ್ತು ಮಹಜರ್ ಮಾಡಿ, ನಿಪಿ-4, 5 ರಂತೆ ಫೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಂತರ ಅದೇದಿನ ಬೆಳಗ್ಗೆ 11.20-

12.20 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ-3, 4 ರವರ ಸಮಕ್ಷಮ ನಿಪಿ-3 ರಂತೆ ಸ್ಥಳ ಮಹಜರ್ ಮಾಡಿ, ನಿಪಿ-6, 7 ರಂತೆ ಪೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-2, 3, 8 ರಲ್ಲಿರುವ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಏನು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು